REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 47 । 25 ಫೆಬ್ರವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಮಹಾಮಂಡಳದಿಂದ ವಿಡಿಯೋ ಕಾನ್ಫರೆನ್ಸ್



**ಬೆಂಗಳೂರು :** ಮಹಾಮಂಡಳವು ದಿನಾಂಕ : 19.02.2026ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ Latest RBI Guidelines for Urban Cooperative Banks ವಿಷಯದ ಕುರಿತು ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಭಾಗವಹಿಸಿ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳಿಗೆ ಸ್ವಾಗತಿಸಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಹಲವಾರು ವಿಷಯಗಳ ಬಗ್ಗೆ ಭೌತಿಕವಾಗಿ ಮತ್ತು ವೆಬಿನಾರ್ ಮೂಲಕ ಅನೇಕ ಮಾಹಿತಿಗಳನ್ನು ಒದಗಿಸುತ್ತಿರುವುದಲ್ಲದೆ ಪತ್ರಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ.

ಈ ದಿನ ಏರ್ಪಡಿಸಿರುವ ವೆಬಿನಾರ್‌ನಲ್ಲಿ ತಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದರು. ಬ್ಯಾಂಕಿನ ನಿರ್ದೇಶಕರ ಪದಾವಧಿ 10 ವರ್ಷಗಳ ಬಗ್ಗೆ ಮಾತನಾಡಿ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ತಿದ್ದುಪಡಿಯಲ್ಲಿ ಯಾವುದೇ ಸ್ಪಷ್ಟತೆ ಹಾಗೂ ಯಾರಿಗೆ ತೆಗೆದುಹಾಕುವ ಅಧಿಕಾರದ ಬಗ್ಗೆ ಸ್ಪಷ್ಟನೆ ಇಲ್ಲದಿರುವುದರಿಂದ ತಾವುಗಳು ಯಥಾವತ್ತಾಗಿ ಇರುವ ವ್ಯವಸ್ಥೆಯಲ್ಲಿಯೇ ಮುಂದುವರೆಸಬೇಕಾಗಿ ಮಹಾಮಂಡಳದ ಪರವಾಗಿ ಸಭೆಗೆ ವಿವರಿಸಿದರು.

ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರು Latest RBI Guidelines for Urban Cooperative Banks ವಿಷಯದ ಕುರಿತು ಉಪನ್ಯಾಸ ನೀಡಿದರು.

ಕೊನೆಯಲ್ಲಿ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ವಂದನಾರ್ಪಣೆ ಸಲ್ಲಿಸಿದರು. ಈ ವೆಬಿನಾರ್‌ನಲ್ಲಿ 250 ಪ್ರತಿನಿಧಿಗಳು ಭಾಗವಹಿಸಿದ್ದರು.

3 16ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ರಾಜ್ಯದ ತೆರಿಗೆ ಪಾಲು ಶೇ.4.13ಕ್ಕೆ ಏರಿಕೆ

5 ರಿಸರ್ವ್ ಬ್ಯಾಂಕಿನ ನೂತನ ಕರಡು ನಿಯಮ : ಜುಲೈ 1 ರಿಂದ ಜಾರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ಬ್ಯಾಂಕುಗಳು ಅಥವಾ ಅವುಗಳ ಏಜೆಂಟ್‌ಗಳು ಗ್ರಾಹಕರನ್ನು ಬೆದರಿಸಲು ಸಾಧ್ಯವಿಲ್ಲ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ತಂತ್ರಜ್ಞಾನವನ್ನು ಅರಿಯೋಣ, ಬೆಳೆಯೋಣ ರಾಜ್ಯವನ್ನು ಆರ್ಥಿಕವಾಗಿ ಸದೃಢಗೊಳಿಸೋಣ

ನಮ್ಮ ರಾಜ್ಯದಲ್ಲಿ 249 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, 1122 ಶಾಖೆಗಳನ್ನು ಹೊಂದಿವೆ. ರಾಜ್ಯದ ಎಲ್ಲ ಸಹಕಾರ ಬ್ಯಾಂಕುಗಳಲ್ಲಿ 8,632 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ನಮ್ಮ ಸಹಕಾರ ಬ್ಯಾಂಕುಗಳಲ್ಲಿ 23,27,413 ಸದಸ್ಯರಿದ್ದು ಇದು ನಮ್ಮ ಶಕ್ತಿಯನ್ನು, ಸಾಮರ್ಥ್ಯವನ್ನು ತೋರಿಸುತ್ತದೆ. ನಮ್ಮಲ್ಲಿ 58,225 ಸಾವಿರ ಕೋಟಿ ರೂಪಾಯಿಗಳ ದುಡಿಯುವ ಬಂಡವಾಳವಿದ್ದು, ರೂ.481.74 ಕೋಟಿ ಲಾಭವನ್ನು ಗಳಿಸಿ ಪ್ರಗತಿ ಸಾಧಿಸಿವೆ. ಶೂನ್ಯ ಅನುತ್ಪಾದಕ ಆಸ್ತಿಯನ್ನು ಹೊಂದಿದ್ದು, ಉತ್ತಮ ಶ್ರೇಯಾಂಕ ಹೊಂದಿವೆ. ಇದೆಲ್ಲವೂ ಸದಸ್ಯರು, ಗ್ರಾಹಕರು ನಮ್ಮಲ್ಲಿ ಇಟ್ಟಿರುವ ನಂಬಿಕೆಯೇ ಕಾರಣವಾಗಿದೆ ಎಂದು ಎದೆ ಮುಟ್ಟಿ ಹೇಳಬಹುದಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಸಾಧನೆಯನ್ನು ನಾವುಗಳು ತೋರಬೇಕಿದೆ.

ನಾವು ಇಂದು ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಪ್ರತಿ ದಿನವೂ ತಂತ್ರಜ್ಞಾನದಲ್ಲಿ ನೂತನ ಆವಿಸ್ಕಾರಗಳು ಕಂಡುಬರುತ್ತಿವೆ. ಕಾಲದ ಯುಗಧರ್ಮಕ್ಕೆ ಅನುಗುಣವಾದ ಮಾಹಿತಿ ತಂತ್ರಜ್ಞಾನ ಅರಿಯಬೇಕಿದೆ–ಅಳವಡಿಸಿಕೊಳ್ಳಬೇಕಿದೆ. ದೇಶದ ಎಲ್ಲೋ ಮೂಲೆಯಲ್ಲಿರುವ ಶಾಖಾ ಕಛೇರಿಯ ವಹಿವಾಟನ್ನು ಮುಖ್ಯ ಕಚೇರಿಯ ಕಂಪ್ಯೂಟರ್ ನೋಡಿ ತಿಳಿದುಕೊಳ್ಳುವ ವ್ಯವಸ್ಥೆ ಇದ್ದು, ಡಿಜಿಟಲ್ ವ್ಯವಸ್ಥೆಯ ಮೂಲಕ ಸಾಲ ನೀಡುವುದು ಮತ್ತು ಪಾವತಿ ಸ್ವೀಕರಿಸುವುದು, ಠೇವಣಿ ಮಾಡುವುದು ಎಲ್ಲವೂ ಬ್ಯಾಂಕಿಂಗ್ ವ್ಯವಸ್ಥೆಯ ಭಾಗವಾಗಿದೆ. ಆದ್ದರಿಂದಲೇ ನಾವುಗಳು ಅದಕ್ಕನುಗುಣವಾಗಿ ಎಲ್ಲ ಬಗೆಯ ತಂತ್ರಜ್ಞಾನವನ್ನು ಕಾಲಕಾಲಕ್ಕೆ ಅಳವಡಿಸಿಕೊಂಡು ಮುನ್ನಡೆಯುತ್ತಿದ್ದೇವೆ.

ಅದಕ್ಕೆ ಅಗತ್ಯವಿರುವ ಶಿಕ್ಷಣ–ತರಬೇತಿ ಉಪನ್ಯಾಸವನ್ನು ನಮ್ಮ ಮಹಾಮಂಡಳ ಏರ್ಪಡಿಸುತ್ತದೆ. ಆಗಿಂದ್ದಾಗ್ಗೆ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು, ತರಬೇತಿ ಶಿಬಿರಗಳನ್ನು ಏರ್ಪಡಿಸಿ, ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಅಧಿಕಾರಿ–ಸಿಬ್ಬಂದಿಗಳಿಗೆ ಉಪನ್ಯಾಸ, ಶಿಕ್ಷಣ ತರಬೇತಿಗಳನ್ನು ನೀಡಲಾಗುತ್ತಿದೆ. ಇದರಿಂದಾಗಿ ಮಾಹಿತಿ ತಂತ್ರಜ್ಞಾನದಲ್ಲಿ ನಮ್ಮವರು ಬೆಳವಣಿಗೆ ಸಾಧಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಇದರೊಂದಿಗೆ ಸಹಕಾರ ಬ್ಯಾಂಕಿಂಗ್ ವಲಯ ಇನ್ನೂ ಪ್ರಗತಿ ಸಾಧಿಸಬೇಕಿದೆ. ಸಹಕಾರ ವಲಯದ ಮೇಲೆ ನಗರ, ಗ್ರಾಮೀಣ ಪ್ರದೇಶಗಳ ನಿರ್ಲಕ್ಷಿತ ಸಮುದಾಯದವರು ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿದ್ದಾರೆ. ಏಕೆಂದರೆ ಈ ವರ್ಗದ ಜನರ ಆರ್ಥಿಕ ಜೀವನಾಡಿಯಾಗಿ ಸಹಕಾರ ಕ್ಷೇತ್ರ ನಿಜವಾಗಿಯೂ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಅಪಾರ ಪಶು ಸಂಪತ್ತಿದೆ, ಹಲವು ಲಕ್ಷ ಗ್ರಾಮೀಣ ಕುಟುಂಬಗಳು ಇವುಗಳ ಪಾಲಕರಾಗಿದ್ದಾರೆ. ನಮ್ಮಲ್ಲಿ ಪ್ರತಿವಾರ ನಡೆಯುವ ಸಂತೆಗಳಲ್ಲಿ ಹಲವು ಕೋಟಿ ರೂಗಳ ಪಶು ವ್ಯಾಪಾರ ನಡೆದರೂ, ವಾರ್ಷಿಕ ರೂ.20,000 ಕೋಟಿಗಳಿಗೂ ಹೆಚ್ಚಿನ ವ್ಯವಹಾರ ನಡೆಯುವ ಅಂದಾಜಿದೆ. ಇದರಿಂದಾಗಿಯೇ ಈ ಭಾಗದಲ್ಲಿ ವಾಣಿಜ್ಯ ಬ್ಯಾಂಕುಗಳ ವಹಿವಾಟು ಶೇ.21ರಷ್ಟು ಮಾತ್ರ ಇದ್ದರೆ, ಸಹಕಾರ ಬ್ಯಾಂಕುಗಳ ವಹಿವಾಟು ಶೇ.79ರಷ್ಟಿದೆ. ಇದು ಪಟ್ಟಣ ಸಹಕಾರ ಬ್ಯಾಂಕುಗಳು ಈ ಭಾಗದ ಆರ್ಥಿಕ ಸೇರ್ಪಡೆಯ ಆಧಾರಸ್ತಂಭಗಳಾಗಿರುವುದೇ ಕಾರಣವಾಗಿದೆ. ಇದು ನಮ್ಮ ಶಕ್ತಿ. ಇದನ್ನು ಇನ್ನೂ ವಿಸ್ತರಿಸಬೇಕಿದೆ. ಅದು ಸಾಧ್ಯವಾಗಬೇಕಿದ್ದರೆ, ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ದುಡಿಯುವ ಪ್ರತಿಯೊಬ್ಬರು ಪ್ರತಿದಿನವೂ ಬದಲಾಗುತ್ತಿರುವ ತಂತ್ರಜ್ಞಾನವನ್ನು ಅರಿಯುತ್ತಲೇ ಇರಬೇಕಾಗುತ್ತದೆ. ಅರಿಯೋಣ, ಬೆಳೆಯೋಣ ದೇಶವನ್ನು ರಾಜ್ಯವನ್ನು ಆರ್ಥಿಕವಾಗಿ ಸದೃಡಗೊಳಿಸೋಣ.

▶▶ ಎಚ್.ಕೆ. ಪಾಟೀಲ

## ಯುಪಿಐ ಮೂಲಕ ಇಪಿಎಫ್ ಹಣವನ್ನು ಹಿಂಪಡೆಯಲು ಸಾಧ್ಯ: ಏಪ್ರಿಲ್‌ನಲ್ಲಿ ಜಾರಿಗೆ

ಇನ್ನು ಮುಂದಿನ ದಿನಗಳಲ್ಲಿ ಇಪಿಎಫ್ ಹಣವನ್ನು ಯುಪಿಐ ಮೂಲಕ ಹಿಂಪಡೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ನಿವೃತ್ತಿ ನಿಧಿ ಸಂಸ್ಥೆಯ ಇಪಿಎಫ್‌ಒ ಚಂದಾದಾರರು ತಮ್ಮ ಉದ್ಯೋಗಿಗಳ ಭವಿಷ್ಯ ನಿಧಿ ಮೊತ್ತವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಗಳಿಗೆ ಯುಪಿಐ ಪಾವತಿ ಗೇಟ್‌ವೇ ಮೂಲಕ ಈ ವರ್ಷದ ಏಪ್ರಿಲ್‌ನಲ್ಲಿ ಬಿಡುಗಡೆಯಾಗಲಿರುವ ಹೊಸ ಮೊಬೈಲ್ ಅಪ್ಲಿಕೇಶನ್ ಬಳಸಿ ಹಿಂಪಡೆಯಲು ಸಾಧ್ಯವಾಗುತ್ತದೆ.

ಕಾರ್ಮಿಕ ಸಚಿವಾಲಯ ಇಪಿಎಫ್‌ನ ಒಂದು ನಿರ್ದಿಷ್ಟ ಭಾಗವನ್ನು ಸ್ಥಗಿತಗೊಳಿಸುವ ಯೋಜನೆಯಲ್ಲಿ ಕೆಲಸ ಮಾಡುತ್ತಿದೆ ಮತ್ತು ಏಕೀಕೃತ ಪಾವತಿ ಇಂಟರ್ಫೇಸ್ (ಯುಪಿಐ) ಬಳಸಿಕೊಂಡು ಅವರ ಬ್ಯಾಂಕ್ ಖಾತೆಯ ಮೂಲಕ ಹಿಂಪಡೆಯಲು ಇಪಿಎಫ್ ಮೊತ್ತದ ಪೈಕಿ ದೊಡ್ಡ ಭಾಗ ಲಭ್ಯವಿರುತ್ತದೆ ಎಂದು ಮೂಲಗಳು.

ನೌಕರರ ಭವಿಷ್ಯ ನಿಧಿ ಸಂಸ್ಥೆಯು ಹೊಸ ಮೊಬೈಲ್ ಫೋನ್ ಅಪ್ಲಿಕೇಶನ್‌ನ್ನು ಹೊರತರಲಿದೆ ಎಂದು ಮೂಲಗಳು ತಿಳಿಸಿವೆ. ಇದರ ಮೂಲಕ ಸದಸ್ಯರು ಯುಪಿಐ ಗೇಟ್‌ವೇ ಬಳಸಿ ತಮ್ಮ ಇಪಿಎಫ್ ಹಣವನ್ನು ಹಿಂಪಡೆಯಲು ಮತ್ತು ಪಾಸ್‌ಬುಕ್ ಬ್ಯಾಲೆನ್ಸ್‌ನಂತಹ ಇತರ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಪ್ರಸ್ತುತ, ಸದಸ್ಯರು ತಮ್ಮ ಇಪಿಎಫ್ ಖಾತೆಗಳನ್ನು ಪ್ರವೇಶಿಸಲು ಮತ್ತು ಅವರ ಸೇವೆಗಳನ್ನು ಪಡೆಯಲು ಯುನಿವರ್ಸಲ್ ಅಕೌಂಟ್ ನಂಬರ್ (ಯುಎಎನ್) ಪೋರ್ಟಲ್ ಅಥವಾ ಉಮಾಂಗ್ ಅಪ್ಲಿಕೇಶನ್‌ನ್ನು ಬಳಸುತ್ತಾರೆ. ಈ ಸೇವೆಗಳು ಎರಡೂ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿರುತ್ತವೆ. ಆದರೆ ಹೊಸ ಮೀಸಲಾದ ಅಪ್ಲಿಕೇಶನ್ ಇಪಿಎಫ್‌ಒ ಚಂದಾದಾರರಿಗೆ ಸೇವೆಗಳ ಪ್ರವೇಶ ಮತ್ತು ವಿತರಣೆಯನ್ನು ಮತ್ತಷ್ಟು ಸುಧಾರಿಸುತ್ತದೆ ಎಂದು ಮೂಲಗಳು ತಿಳಿಸಿವೆ.

**ಇಪಿಎಫ್ ಖಾತೆಯಿಂದ ಶೇ.75 ರಷ್ಟು ಹಣವನ್ನು ತಕ್ಷಣವೇ ಡ್ರಾ ಮಾಡಬಹುದು :** ಚಂದಾದಾರರು ತಮ್ಮ ಸೀಡ್ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲು ಲಭ್ಯವಿರುವ ಅರ್ಹ ಇಪಿಎಫ್ ಬ್ಯಾಲೆನ್ಸ್ ಅನ್ನು ಮೊಬೈಲ್ ಅಪ್ಲಿಕೇಶನ್‌ನಲ್ಲಿ ವೀಕ್ಷಿಸಲು ಸಾಧ್ಯವಾಗುತ್ತದೆ. ವಹಿವಾಟನ್ನು ಪೂರ್ಣಗೊಳಿಸಲು ಚಂದಾದಾರರು ತಮ್ಮ ಲಿಂಕ್ ಮಾಡಲಾದ ಯುಪಿಐ ಪಿನ್‌ನ್ನು ಬಳಸಲು ಅನುಮತಿಸಲಾಗುವುದು, ಇದು ಅವರ ಬ್ಯಾಂಕ್ ಖಾತೆಗಳಿಗೆ ಹಣದ ಸುರಕ್ಷಿತ ವರ್ಗಾವಣೆಯನ್ನು ಖಚಿತಪಡಿಸುತ್ತದೆ.

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ : 9ನೇ ಶಾಖೆ ಆರಂಭ



ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಇದರ 9ನೇ ಶಾಖೆಯನ್ನು ಪಾವಗಡ ತಾಲ್ಲೂಕು, ತಿರುಮಣಿ ಗ್ರಾಮದಲ್ಲಿ ತೆರೆಯಲಾಯಿತು. ಸದರಿ ಸ್ಥಳವು ಕರ್ನಾಟಕ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಹಸಿರು ಶಕ್ತಿ (Green Energy) ಯೋಜನೆಯಲ್ಲಿ ಸುಮಾರು 2300 ರೈತರ 13 ಸಾವಿರ ಎಕರೆ ಜಮೀನಿನಲ್ಲಿ 2050 Mw (Mega Watt) ಬೃಹತ್ ಸೋಲಾರ್ ಪಾರ್ಕನ್ನು ಅಭಿವೃದ್ಧಿ ಪಡಿಸಲಾಗಿದೆ.

ಶಾಖೆಯ ಪ್ರಾರಂಭದ ವೇಳೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವ ರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಸಿ.ಚೆನ್ನಾರೆಡ್ಡಿ, ಇತರೆ ನಿರ್ದೇಶಕರೊಂದಿಗೆ ವ್ಯವಸ್ಥಾಪಕ ನಿರ್ದೇಶಕರಾದ ಜಿ. ಪ್ರವೀಣ್‌ಕುಮಾರ್ ಮತ್ತು ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## 16ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ರಾಜ್ಯದ ತೆರಿಗೆ ಪಾಲು ಶೇ.4.13ಕ್ಕೆ ಏರಿಕೆ




**ನವದೆಹಲಿ:** ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ರೂ.63,050 ಕೋಟಿ ಅನುದಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಇದರೊಂದಿಗೆ 16ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ, ಆದಾಯ ಹಂಚಿಕೆಯ ಹೊಸ ಸೂತ್ರದಡಿ ಅತಿ ಹೆಚ್ಚು ಲಾಭ ಪಡೆದ ರಾಜ್ಯವಾಗಿ ಹೊರಹೊಮ್ಮಿದೆ.

15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶೇ.3.65ರಷ್ಟು ತೆರಿಗೆ ಆದಾಯ ಹಂಚಿಕೆಗೆ ಶಿಫಾರಸು ಮಾಡಿತ್ತು. ಆದರೆ 16ನೇ ಆಯೋಗವು ಈ ಪ್ರಮಾಣವನ್ನು ಶೇ.4.13ಕ್ಕೆ ಹೆಚ್ಚಳ ಮಾಡಿದೆ. ಇದರ ಪರಿಣಾಮ 2026-31ರ ಅವಧಿಯಲ್ಲಿ ಕರ್ನಾಟಕಕ್ಕೆ ವಾರ್ಷಿಕ ಹೆಚ್ಚುವರಿ 7387 ಕೋಟಿ ರೂ. ವಾರ್ಷಿಕ ಅನುದಾನ ಸಿಗಲಿದೆ. ಈ ಮೂಲಕ ಏರಿಕೆ ಪ್ರಮಾಣದಲ್ಲಿ ಅತಿ ಹೆಚ್ಚು ಲಾಭ ಕರ್ನಾಟಕಕ್ಕೆ ಆಗಿದೆ ಎಂದು ಅಂಕಿ ಅಂಶಗಳು ಹೇಳಿವೆ.

**ಲಾಭ ಹೇಗೆ? :** ರಾಜ್ಯಗಳಿಗೆ ಆದಾಯ ಹಂಚಿಕೆ ಮಾಡುವಾಗ ಪರಿಗಣಿಸುವ ಮಾನದಂಡಗಳಿಗೆ ಈ ಬಾರಿ ಹಣಕಾಸು ಆಯೋಗವು ಜಿಡಿಪಿಗೆ ನೀಡಿದ ಪಾಲಿಗೆ ಶೇ.10ರಷ್ಟು ಅಧ್ಯತೆ ನೀಡಿದೆ. ಜೊತೆಗೆ ಜನಸಂಖ್ಯಾ ಕಡಿತಕ್ಕೂ ಕೂಡಾ ಅಧ್ಯತೆ ನೀಡಿದೆ. ಹೀಗಾಗಿ ಜನಸಂಖ್ಯೆ ಕಡಿತ ಮಾಡಿದ ಅಂಕಗಳು ಮತ್ತು ಜಿಡಿಪಿಗೆ ದೇಶದಲ್ಲೇ 2ನೇ ಅತಿದೊಡ್ಡ ಪಾಲು ನೀಡುವ ಕರ್ನಾಟಕದ ಒಟ್ಟಾರೆ ಅಂಕಗಳು ಹೆಚ್ಚಾದ ಕಾರಣ ಕರ್ನಾಟಕಕ್ಕೆ ನಿಗದಿ ಪಡಿಸಿದ ತೆರಿಗೆ ಹಂಚಿಕೆ ಪಾಲು ಶೇ.3.65ರಿಂದ ಶೇ.4.13ಕ್ಕೆ ಹೆಚ್ಚಳ ಆಗಿದೆ.

ಇನ್ನು ಕರ್ನಾಟಕ ಹೊರತುಪಡಿಸಿದರೆ ಇದೇ ಕಾರಣಕ್ಕೆ ದಕ್ಷಿಣದ ಮತ್ತೊಂದು ರಾಜ್ಯವಾದ ಕೇರಳ ಹೆಚ್ಚಿನ ಲಾಭ ಪಡೆದ 2ನೇ ರಾಜ್ಯವಾಗಿ ಹೊರಹೊಮ್ಮಿದೆ. ಕೇರಳದ ತೆರಿಗೆ ಪಾಲನ್ನು ಶೆ.1.93 ರಿಂದ ಶೇ.2.38ಕ್ಕೆ ಹೆಚ್ಚಳ ಮಾಡಲಾಗಿದೆ. ಇನ್ನು ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರುವ ಮಹಾರಾಷ್ಟ್ರದ ಪಾಲು ಅಲ್ಪ ಹೆಚ್ಚಳ ಕಂಡು ಶೇ.6.44ಕ್ಕೆ ತಲುಪಿದೆ.

**ದಕ್ಷಿಣ ವಾದಕ್ಕೆ ಅಲ್ಪ ಬೆಲೆ :** ದಕ್ಷಿಣದ ರಾಜ್ಯಗಳು ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡುತ್ತಿವೆ. ಜನಸಂಖ್ಯೆ ಕಡಿಮೆ ಮಾಡಬೇಕೆಂಬ ಕೇಂದ್ರದ ನಿಯಮವನ್ನೂ ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿವೆ. ಆದರೆ ಜಿಎಸ್‌ಟಿ ಮತ್ತು ಜನಸಂಖ್ಯೆ ಎರಡೂ ವಿಷಯ ಕಡೆಗಣಿಸಿದ ಕಾರಣ ಭಾರೀ ತೆರಿಗೆ ಅನ್ಯಯವಾಗುತ್ತಿದೆ ಎಂದು ವಾದಿಸಿದ್ದವು. ಸೆಂಟ್ರಲ್ ಪೂಲ್‌ನಲ್ಲಿ ಶೇ.50ರಷ್ಟು ಪಾಲನ್ನು ರಾಜ್ಯಗಳಿಗೆ ಮರಳಿಸಬೇಕು ಎಂದು ಕರ್ನಾಟಕ ಸೇರಿ 22 ರಾಜ್ಯಗಳು ವಾದಿಸಿದ್ದವು. ಆದರೆ ಹಂಚಿಕೆ ಪಾಲನ್ನು ಶೇ.41ಕ್ಕೇ ಸೀಮಿತಗೊಳಿಸಿರುವ ಹಣಕಾಸು ಆಯೋಗ, ಹೆಚ್ಚಿನ ತೆರಿಗೆ ಮತ್ತು ಜನಸಂಖ್ಯೆ ಕಡಿತದ ಅಂಶಗಳನ್ನು ಆದಾಯ ಹಂಚಿಕೆ ಮಾನದಂಡದಲ್ಲಿ ಪ್ರಮುಖವಾಗಿ ಪರಿಗಣಿಸಿದ ಕಾರಣ ಇವುಗಳಿಗೆ ಹೆಚ್ಚಿನ ಆದಾಯ ಸಿಕ್ಕಿದೆ.

# ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಹಣ ನಿರ್ವಹಣೆ ಮಾಡೋದು ಹೇಗೆ?

ಬ್ಯಾಂಕ್ ಖಾತೆಗಳಲ್ಲಿ ಕನಿಷ್ಠ ಹಣ ನಿರ್ವಹಣೆ ಮಾಡದಿದ್ದರೆ ದಂಡ ವಿಧಿಸಲಾಗುತ್ತದೆ. ದೇಶದಲ್ಲಿರುವ ಸಾರ್ವಜನಿಕ ಮತ್ತು ಖಾಸಗಿ ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಖಾತೆಯಲ್ಲಿ ಕನಿಷ್ಠ ಹಣ ನಿರ್ವಹಣೆ ಮಾಡುವಂತೆ ಸಲಹೆ ನೀಡುತ್ತದೆ. ಕನಿಷ್ಠ ಮೊತ್ತ ನಿರ್ವಹಣೆ ಬ್ಯಾಂಕುಗಳಿಂದ ಬ್ಯಾಂಕುಗಳಿಗೆ ಬೇರೆ ಬೇರೆಯಾಗಿರುತ್ತವೆ. ಖಾತೆಯಲ್ಲಿ ಕನಿಷ್ಠ ಮೊತ್ತ ನಿರ್ವಹಣೆ ಮಾಡದಿದ್ರೆ ಬ್ಯಾಂಕುಗಳು ದಂಡವನ್ನು ವಿಧಿಸುತ್ತವೆ. ದಂಡದಿಂದ ಪಾರಾಗಲು ಗ್ರಾಹಕರು ತಮ್ಮ ಖಾತೆಯಲ್ಲಿ ಬ್ಯಾಂಕ್ ಸೂಚಿಸಿದ ಕನಿಷ್ಠ ಹಣ ನಿರ್ವಹಣೆ ಮಾಡೋದು ಕಡ್ಡಾಯವಾಗಿರುತ್ತದೆ. ಮಾಸಿಕ ಸರಾಸರಿ ಬ್ಯಾಲೆನ್ಸ್ ಅನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ ಮತ್ತು ಅದನ್ನು ನಿರ್ವಹಿಸದಿದ್ದರೆ ಹೇಗೆ ದಂಡ ವಿಧಿಸಲಾಗುತ್ತೆ ಎಂಬುದರ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

### ಮಾಸಿಕ ಸರಾಸರಿ ಬ್ಯಾಲೆನ್ಸ್ ಎಂದರೇನು?

ಮಾಸಿಕ ಸರಾಸರಿ ಬ್ಯಾಲೆನ್ಸ್ ಅಂದ್ರೆ ಒಂದು ತಿಂಗಳ ಅವಧಿಯಲ್ಲಿ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗುವ ಸರಾಸರಿ ಬ್ಯಾಲೆನ್ಸ್. ಇದನ್ನು ತಿಂಗಳಿನ ಪ್ರತಿ ದಿನದ ಮುಕ್ತಾಯದ ಬ್ಯಾಲೆನ್ಸ್ ಅನ್ನು ಒಟ್ಟುಗೂಡಿಸಿ ಮತ್ತು ಅದನ್ನು ತಿಂಗಳಿನ ದಿನಗಳ ಸಂಖ್ಯೆಯಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುತ್ತದೆ.

### ಮಾಸಿಕ ಸರಾಸರಿ ಬ್ಯಾಲೆನ್ಸ್ ಹೇಗೆ ಲೆಕ್ಕ ಹಾಕಲಾಗುತ್ತೆ?

ಉದಾಹರಣೆಗೆ ನಿಮ್ಮ ಖಾತೆಯಲ್ಲಿ ಒಂದು ತಿಂಗಳ ಅವಧಿಯಲ್ಲಿ ಈ ರೀತಿಯಾಗಿದೆ ಎಂದು ಭಾವಿಸೋಣ.

ದಿನವೊಂದಕ್ಕೆ 1–10: ರೂ. 10,000

ದಿನವೊಂದಕ್ಕೆ 11–20: ರೂ. 8,000

ದಿನವೊಂದಕ್ಕೆ 21–30: ರೂ. 12,000

ಮಾಸಿಕ ಸರಾಸರಿ ಬ್ಯಾಲೆನ್ಸ್ ಅನ್ನು ಲೆಕ್ಕಹಾಕಲು ಬ್ಯಾಂಕ್ ಪ್ರತಿ ದಿನದ ಒಟ್ಟು ಬ್ಯಾಲೆನ್ಸ್ ಅನ್ನು ಸೇರಿಸುತ್ತದೆ

(ರೂ. 10,000 x 10) + (ರೂ. 8,000 x 10) + (ರೂ. 12,000 x 10) = ರೂ. 100,000 + ರೂ. 80,000 + ರೂ. 120,000 = ರೂ. 300,000 ನಂತರ, ಒಟ್ಟು ಮೊತ್ತವನ್ನು ತಿಂಗಳಿನ ದಿನಗಳ ಸಂಖ್ಯೆಯಿಂದ ಭಾಗಿಸಲಾಗುತ್ತದೆ. ಉದಾಹರಣೆಗೆ ಈ ತಿಂಗಳಿನಲ್ಲಿ 30 ದಿನಗಳಿವೆ ಎಂದು ಭಾವಿಸೋಣ. ಆಗ ರೂ.3,00,000 ಅನ್ನು ದಿನಗಳ ಸಂಖ್ಯೆ 30 ರಿಂದ




ಭಾಗಾಕಾರ ಮಾಡಲಾಗುತ್ತದೆ. ರೂ.300,000 ÷ 30=ರೂ.10,000 ಈ ಲೆಕ್ಕಾಚಾರದ ಪ್ರಕಾರ ನಿಮ್ಮ ಉಳಿತಾಯ ಖಾತೆಯ ಮಾಸಿಕ ಸರಾಸರಿ ಬ್ಯಾಲೆನ್ಸ್ 10,000 ರೂಪಾಯಿ ಆಗುತ್ತದೆ.

### ಮಾಸಿಕ ಸರಾಸರಿ ಬ್ಯಾಲೆನ್ಸ್ ನಿರ್ವಹಿಸದಿದ್ರೆ ದಂಡ

ಗ್ರಾಹಕರು ಮಾಸಿಕ ಸರಾಸರಿ ಬ್ಯಾಲೆನ್ಸ್ ಮೇಂಟೈನ್ ಮಾಡದಿದ್ದರೆ ಬ್ಯಾಂಕುಗಳು ದಂಡ ವಿಧಿಸುತ್ತವೆ. ನಿಮ್ಮ ಖಾತೆಯಲ್ಲಿನ ಹಣವನ್ನು ದಂಡದ ರೂಪದಲ್ಲಿ ಕಡಿತಗೊಳಿಸಲಾಗುತ್ತದೆ. ಈ ದಂಡದ ಮೊತ್ತ ಸಾಮಾನ್ಯವಾಗಿ 3 ಅಂಕಿಯಲ್ಲಿರುತ್ತದೆ. ಮಾಸಿಕ ಸರಾಸರಿ ಬ್ಯಾಲೆನ್ಸ್ ಅವಶ್ಯಕತೆಯನ್ನು ಪೂರೈಸಬಹುದಾದ ಸಂದರ್ಭಗಳಲ್ಲಿ ಕೆಲವು ಬ್ಯಾಂಕುಗಳು ಹೆಚ್ಚಿನ ದಂಡವನ್ನು ವಿಧಿಸಬಹುದು. ಈ ದಂಡದಿಂದ ತಪ್ಪಿಸಿಕೊಳ್ಳಲು ನಿಗಧಿತ ಹಣವನ್ನು ಖಾತೆಯಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಮಾಸಿಕ ಸರಾಸರಿ ಬ್ಯಾಲೆನ್ಸ್ ಅವಶ್ಯಕತೆಗಳು ಮತ್ತು ದಂಡಗಳಿಗಾಗಿ ನಿಮ್ಮ ಬ್ಯಾಂಕಿನೊಂದಿಗೆ ಪರಿಶೀಲಿಸುವುದು ಅತ್ಯಗತ್ಯವಾಗಿರುತ್ತದೆ.

### ದಂಡಗಳನ್ನು ತಪ್ಪಿಸಲು ಸಲಹೆಗಳು

1. ಅಗತ್ಯವಿರುವ ಬ್ಯಾಲೆನ್ಸ್ ಅನ್ನು ನಿರ್ವಹಿಸಲು ಇತರ ಖಾತೆಗಳಿಂದ ಸ್ವಯಂಚಾಲಿತ ವರ್ಗಾವಣೆಗಳನ್ನು ಹೊಂದಿಸಿ.
2. ನಿಮ್ಮ ಖಾತೆಯ ಬ್ಯಾಲೆನ್ಸ್‌ಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ.
3. ಶೂನ್ಯ-ಬ್ಯಾಲೆನ್ಸ್ ಖಾತೆ ಅಥವಾ ಮಾಸಿಕ ಸರಾಸರಿ ಬ್ಯಾಲೆನ್ಸ್ ಅವಶ್ಯಕತೆಯಿಲ್ಲದ ಖಾತೆಯನ್ನು ಆಯ್ಕೆ ಮಾಡುವುದನ್ನು ಪರಿಗಣಿಸಿ.

# ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆ

**ಹೊಸದುರ್ಗ :** ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕಿನ ಆಡಳಿತ ಮಂಡಲಿಯ ಅವಧಿಯು ಮುಕ್ತಾಯಗೊಂಡು 2025–26ನೇ ಸಾಲಿನಿಂದ ಮುಂದಿನ 5 ವರ್ಷಗಳ ಅವಧಿಗೆ ದಿನಾಂಕ: 14.02.2026 ರಂದು ನಿಗದಿಪಡಿಸಿದ್ದ ಆಡಳಿತ ಮಂಡಳಿಯ ಚುನಾವಣೆಯಲ್ಲಿ



ನೂತನವಾಗಿ ಬ್ಯಾಂಕಿನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಅದರಂತೆ ದಿನಾಂಕ: 18.02.2026ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಶ್ರೀಯುತ ಹೆಚ್.ಎಸ್. ಶಿವಸ್ವಾಮಿ ರವರು ಅಧ್ಯಕ್ಷರಾಗಿ ಹಾಗೂ ಶ್ರೀಯುತ ಡಿ. ಆದಿರಾಜಯ್ಯರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

ಅವಿರೋಧವಾಗಿ ಆಯ್ಕೆಯಾದ ನಿರ್ದೇಶಕರುಗಳು ಶ್ರೀ ಪ್ರತಾಪ್ ಎನ್., ಶ್ರೀ ಲಕ್ಷ್ಮೀರಂಗನಾಥ ಆರ್., ಶ್ರೀ ತಿಪ್ಪೇಸ್ವಾಮಿ ಜಿ.ಎನ್., ಶ್ರೀ ಶ್ರೀನಾಥ್ ಟಿ.ಎಸ್, ಶ್ರೀ ಕಲ್ಲೇಶ್ ಎನ್., ಶ್ರೀ ಆದಿರಾಜಯ್ಯ ಡಿ., ಶ್ರೀ ಕೃಷ್ಣಮೂರ್ತಿ ಡಿ.ಎನ್., ಶ್ರೀ ಗಿರೀಶ್ ಎ.ಜಿ., ಶ್ರೀ ಪಾಪಯ್ಯ ಜಿ., ಶ್ರೀಮತಿ ಪಾರ್ವತಮ್ಮ ಟಿ.ಸಿ., ಶ್ರೀ ಹಂಜಿ ಶಿವಸ್ವಾಮಿ ಯಾನೆ ಹೆಚ್.ಎಸ್. ಶಿವಸ್ವಾಮಿ, ಶ್ರೀಮತಿ ನಾಗಲಾಂಬಿಕಾ ಕಲ್ಮಠ್, ಶ್ರೀಮತಿ ಡಾ. ವೀಣಾ ಉಮೇಶ್.

# ರಿಸರ್ವ್ ಬ್ಯಾಂಕಿನ ನೂತನ ಕರಡು ನಿಯಮ : ಜುಲೈ 1 ರಿಂದ ಜಾರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ಬ್ಯಾಂಕುಗಳು ಅಥವಾ ಅವುಗಳ ಏಜೆಂಟ್‌ಗಳು ಗ್ರಾಹಕರನ್ನು ಬೆದರಿಸಲು ಸಾಧ್ಯವಿಲ್ಲ

**ಮುಂಬೈ:** ಇನ್ನು ಮುಂದೆ ಸಾಲ ವಸೂಲಾತಿ ಹೆಸರಿನಲ್ಲಿ ಬ್ಯಾಂಕುಗಳು ಅಥವಾ ಅವುಗಳ ಏಜೆಂಟ್‌ಗಳು ಗ್ರಾಹಕರನ್ನು ಬೆದರಿಸಲು ಸಾಧ್ಯವಿಲ್ಲ. ರಿಸರ್ವ್ ಬ್ಯಾಂಕ್, ವಾಣಿಜ್ಯ ಬ್ಯಾಂಕುಗಳು ಮತ್ತು ಹೌಸಿಂಗ್ ಫೈನಾನ್ಸ್ ಕಂಪನಿಗಳಿಗಾಗಿ ಸಾಲ ವಸೂಲಾತಿಗೆ ಸಂಬಂಧಿಸಿದ ನೂತನ ಕರಡು ನಿಯಮಗಳನ್ನು ಹೊರಡಿಸಿದೆ.

ನೂತನ ಕರಡು ನಿಯಮಗಳ ಪ್ರಕಾರ, ಏಜೆಂಟ್ ಮಾಡುವ ಪ್ರತಿ ಕರೆಯೂ ರೆಕಾರ್ಡ್ ಆಗಬೇಕು ಮತ್ತು ಗ್ರಾಹಕರೊಂದಿಗೆ ಸಭ್ಯತೆಯಿಂದ ವರ್ತಿಸಬೇಕು. ವಿಶೇಷವೆಂದರೆ, ಮನೆಯಲ್ಲಿ ಸಾವು, ಮದುವೆ ಅಥವಾ ಹಬ್ಬಗಳಂತಹ ಸಂದರ್ಭಗಳಲ್ಲಿ ವಸೂಲಾತಿಗಾಗಿ ಫೋನ್ ಮಾಡುವುದು ಅಥವಾ ಮನೆಗೆ ಹೋಗುವುದನ್ನು ನಿಷೇಧಿಸಲಾಗಿದೆ. ಈ ನಿಯಮಗಳು ಈ ವರ್ಷದ ಜುಲೈ 1 ರಿಂದ ಜಾರಿಗೆ ಬರಲಿವೆ.

**ರಿಸರ್ವ್ ಬ್ಯಾಂಕಿನ ಪ್ರಮುಖ ಬದಲಾವಣೆಗಳು:**

**ಕಾಲ್ ರೆಕಾರ್ಡಿಂಗ್:** ಗ್ರಾಹಕರಿಗೆ ಮಾಡುವ ಪ್ರತಿಯೊಂದು ಕರೆಯನ್ನು ರೆಕಾರ್ಡ್ ಮಾಡಬೇಕು. ವಿವಾದ ಉಂಟಾದಾಗ ಇದು ಸಾಕ್ಷಿಯಾಗಿ ಬಳಕೆಯಾಗುತ್ತದೆ.

**ಸಭ್ಯ ವರ್ತನೆ:** ವಸೂಲಾತಿ ಏಜೆಂಟ್‌ಗಳು ಅವಾಚ್ಯ ಶಬ್ದಗಳ ಬಳಕೆ ಅಥವಾ ಅಸಭ್ಯವಾಗಿ ವರ್ತಿಸುವಂತಿಲ್ಲ.

**ತರಬೇತಿ ಕಡ್ಡಾಯ:** ವಸೂಲಾತಿ ಏಜೆಂಟ್‌ಗಳು ಇನ್ನು ಮುಂದೆ IBF ನಿಂದ ವೃತ್ತಿಪರ ತರಬೇತಿ ಪಡೆಯುವುದು ಕಡ್ಡಾಯ.

**ಸಮಯದ ಮಿತಿ:** ಸಂಜೆ 7 ಗಂಟೆಯ ನಂತರ ಗ್ರಾಹಕರಿಗೆ ಫೋನ್ ಮಾಡುವಂತಿಲ್ಲ.

**ವಿಶೇಷ ಸಂದರ್ಭಗಳ ಗಮನ:** ಮನೆಯಲ್ಲಿ ಸಾವು ಸಂಭವಿಸಿದಾಗ, ಮದುವೆ ಅಥವಾ ಹಬ್ಬಗಳ ಸಂದರ್ಭದಲ್ಲಿ ವಸೂಲಾತಿಗಾಗಿ ಒತ್ತಡ ಹೇರುವಂತಿಲ್ಲ.

**ಹಿನ್ನೆಲೆ ತಪಾಸಣೆ:** ವಸೂಲಾತಿ ಏಜೆಂಟ್‌ಗಳು ಕೆಲಸಕ್ಕೆ ತೆಗೆದುಕೊಳ್ಳುವ ಮೊದಲು ಬ್ಯಾಂಕುಗಳು ಅವರ ಹಿನ್ನೆಲೆಯನ್ನು ಕಡ್ಡಾಯವಾಗಿ ಪರಿಶೀಲಿಸಬೇಕು.

**ಡೇಟಾ ಸುರಕ್ಷತೆ:** ಗ್ರಾಹಕರ ಖಾಸಗಿ ಮಾಹಿತಿಯನ್ನು ಯಾವುದೇ ಕಾರಣಕ್ಕೂ ದುರುಪಯೋಗಪಡಿಸಿಕೊಳ್ಳಬಾರದು.

**ಬ್ಯಾಂಕುಗಳೇ ನೇರ ಹೊಣೆ:** ವಸೂಲಾತಿ ಏಜೆಂಟ್‌ಗಳು ಮಾಡುವ ತಪ್ಪುಗಳಿಗೆ ಅಥವಾ ಅವರ ಅಸಭ್ಯ ವರ್ತನೆಗೆ ಬ್ಯಾಂಕುಗಳೇ ನೇರ ಜವಾಬ್ದಾರರಾಗಿರುತ್ತಾರೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. ಒಂದು ವೇಳೆ ಗ್ರಾಹಕರಿಗೆ ತಪ್ಪು ಮಾಹಿತಿ ನೀಡಿದ್ದರೆ, ಪೂರ್ಣ ಹಣವನ್ನು ರೀಫಂಡ್ ಮಾಡಬೇಕಾಗುತ್ತದೆ.

ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇರುವ ಸಾಲಗಳ ವಿಷಯದಲ್ಲಿ ವಸೂಲಾತಿ ಏಜೆಂಟ್‌ಗಳನ್ನು ನೇಮಕ ಮಾಡಿಕೊಳ್ಳುವಾಗ ಬ್ಯಾಂಕುಗಳು ಅತ್ಯಂತ ಎಚ್ಚರಿಕೆ



ವಹಿಸಬೇಕು ಎಂದು ಸೂಚಿಸಲಾಗಿದೆ. ಬಿಹಾರದಲ್ಲಿ ಸಾಲ ವಸೂಲಾತಿ ಏಜೆಂಟ್‌ಗಳು ಕಿರುಕುಳದಿಂದ ಸಾಲಗಾರನ ಆಪ್ತರೊಬ್ಬರು ಮೃತಪಟ್ಟ ಘಟನೆಯ ನಂತರ ಆರ್‌ಬಿಐ ಈ ಕಠಿಣ ಕ್ರಮಕ್ಕೆ ಮುಂದಾಗಿದೆ. ಸಾಲ ವಸೂಲಾತಿ ಏಜೆಂಟ್‌ಗಳಿಂದ ಕಿರುಕುಳ ಅನುಭವಿಸುತ್ತಿರುವವರು ಆರ್‌ಬಿಐ ಒಂಬುಡ್ಸಮನ್ (RBI Ombudsman)

**ದೂರು ನೀಡುವ ಹಂತ-ಹಂತದ ವಿಧಾನ ಮತ್ತು ಹಂತಗಳು:**

**ಬ್ಯಾಂಕಿಗೆ ಮೊದಲು ದೂರು ನೀಡಿ:** RBI ಗೆ ದೂರು ನೀಡುವ ಮೊದಲು, ನೀವು ಸಂಬಂಧಪಟ್ಟ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯ ಕುಂದುಕೊರತೆ ನಿವಾರಣಾ ವಿಭಾಗಕ್ಕೆ (Grievance Redressal Cell) ಲಿಖಿತವಾಗಿ ದೂರು ನೀಡಬೇಕು.

**30 ದಿನಗಳ ಕಾಯುವಿಕೆ:** ಬ್ಯಾಂಕ್ ನಿಮ್ಮ ದೂರಿಗೆ 30 ದಿನಗಳವರೆಗೆ ಸ್ಪಂದಿಸದಿದ್ದರೆ ಅಥವಾ ಬ್ಯಾಂಕ್ ನೀಡಿದ ಪರಿಹಾರ ನಿಮಗೆ ತೃಪ್ತಿ ನೀಡದಿದ್ದರೆ ಮಾತ್ರ ನೀವು ಆರ್‌ಬಿಐ ಒಂಬುಡ್ಸಮನ್ ದೂರು ನೀಡಬಹುದು.

**ದೂರು ಸಲ್ಲಿಸುವ ಮಾರ್ಗಗಳು:**

**ಆನ್‌ಲೈನ್ ಮೂಲಕ:** ಆರ್‌ಬಿಐ ಅಧಿಕೃತ ಪೋರ್ಟಲ್ CMS (Complaint Management System) https://cms.rbi.org.in ಮೂಲಕ ದೂರು ಸಲ್ಲಿಸಬಹುದು.

**ಇಮೇಲ್ ಮೂಲಕ:** crpc@rbi.org.in ಗೆ ನಿಮ್ಮ ದೂರನ್ನು ಇಮೇಲ್ ಮಾಡಬಹುದು.

**ಟೋಲ್-ಫ್ರೀ ಸಂಖ್ಯೆ:** ಹೆಚ್ಚಿನ ಮಾಹಿತಿಗಾಗಿ ಅಥವಾ ಸಹಾಯಕ್ಕಾಗಿ ಆರ್‌ಬಿಐ ಸಹಾಯವಾಣಿ ಸಂಖ್ಯೆ: 14448ಗೆ ಕರೆ ಮಾಡಬಹುದು.

## ಕನ್ನಡ ಪ್ರಭ ದಿನಪತ್ರಿಕೆ ಮತ್ತು ಸುವರ್ಣನ್ಯೂಸ್ ಸಹಕಾರ ಕ್ಷೇತ್ರದ ಅಪ್ರತಿಮ ಸಾಧಕರಿಗೆ ಕೊಡಮಾಡುವ 'ಕರ್ನಾಟಕ ಸಹಕಾರ ಶಿರೋಮಣಿ-2025' ಪ್ರಶಸ್ತಿಯನ್ನು ಪಡೆದ ಪಟ್ಟಣ ಸಹಕಾರ ಬ್ಯಾಂಕುಗಳ ಸಾಧಕರು



ಶ್ರೀಮತಿ ಸೌಮ್ಯ ಕಲ್ಲೂರ, ಅಧ್ಯಕ್ಷರು, ವಿಜಯಪುರ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿ., ವಿಜಯಪುರ



ಶ್ರೀ ರಾಜೇಶ ರಮಾಕಾಂತ ಅಣ್ವೇಕರ, ಅಧ್ಯಕ್ಷರು, ದೈವಜ್ಞ ಸಹಕಾರ ಬ್ಯಾಂಕ ನಿ., ಬೆಳಗಾವಿ.



ಶ್ರೀ ಶಂಕರಣ್ಣ ಮುನವಳ್ಳಿ, ಅಧ್ಯಕ್ಷರು, ಶ್ರೀ ಗುರುಸಿದ್ದೇಶ್ವರ ಸಹಕಾರ ಬ್ಯಾಂಕ್ ನಿ., ಹುಬ್ಬಳ್ಳಿ ಇವರ ಪರವಾಗಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥ ಶಂಕರಣ್ಣ ಮುನವಳ್ಳಿ ಅವರು ಪ್ರಶಸ್ತಿ ಸ್ವೀಕರಿಸಿದರು.



ಶ್ರೀ ದಿನಕರ ಶೆಟ್ಟಿ ಕೆ, ಅಧ್ಯಕ್ಷರು,
ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಉಡುಪಿ



ಡಾ. ಆನಂದ ಎಸ್, ಉಪಾಧ್ಯಕ್ಷರು,
ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು.




ಶ್ರೀ ಡಿ.ಆರ್. ವಿಜಯಸಾರಥಿ, ಅಧ್ಯಕ್ಷರು, ಶ್ರೀ ಸುಬ್ರಮಣ್ಯೇಶ್ವರ
ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು.



ಶ್ರೀ ಹೆಚ್.ಸಿ. ಗೋಪಾಲ್,
ಅಧ್ಯಕ್ಷರು, ಜನತಾ ಸೇವಾ
ಕೋ-ಆಪರೇಟಿವ್ ಬ್ಯಾಂಕ್ ಲಿ.,
ಬೆಂಗಳೂರು.



# ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರು ಸತತ ಹತ್ತು ವರ್ಷಗಳ ಅಧಿಕಾರಾವಧಿಯ ನಂತರ ಮೂರು ವರ್ಷಗಳ ಬಿಡುವು ಪಡೆಯಬೇಕು ಎಂದು ರಿಜರ್ವ್ ಬ್ಯಾಂಕು ಕರಡು ಸುತ್ತೋಲೆ ಬಿಡುಗಡೆ ಮಾಡಿದೆ. ಅದಕ್ಕೆ ಉತ್ತರವಾಗಿ ನ್ಯಾಫ್‌ಕಬ್ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಆಗುವವರೆಗೆ ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳಬಾರದು ಎಂದು ರಿಜರ್ವ್ ಬ್ಯಾಂಕನ್ನು ಕೇಳಿಕೊಂಡಿದೆ. ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದ ಬಗ್ಗೆ ನಮಗೆ ಮಾಹಿತಿ ನೀಡಿ.**

**– ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪ್ ಬ್ಯಾಂಕ್ ಲಿ.,**

**ಉತ್ತರ:** ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಕಾಯ್ದೆ 2020 ಮತ್ತು ಆರ್‌ಬಿಐ (RBI) ಹೊರಡಿಸಿದ ಎಂಡಿ (MD) ನೇಮಕಾತಿ ಸುತ್ತೋಲೆಗೆ ಸಂಬಂಧಿಸಿದ ಕಾನೂನು ಹೋರಾಟದ ಪ್ರಸ್ತುತ ಸ್ಥಿತಿಯ ವಿವರ ಇಲ್ಲಿದೆ:

ಸುಪ್ರೀಂ ಕೋರ್ಟ್‌ನ ಆದೇಶದಂತೆ, ದೇಶದ ವಿವಿಧ ಹೈಕೋರ್ಟ್‌ಗಳಲ್ಲಿದ್ದ (ಕರ್ನಾಟಕ ಸೇರಿದಂತೆ) ಎಲ್ಲಾ ಅರ್ಜಿಗಳನ್ನು ಈಗ ಮದ್ರಾಸ್ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ.

**ಮುಖ್ಯ ವಾದ:** ಸಹಕಾರಿ ಸಂಘಗಳು 'ರಾಜ್ಯ ಪಟ್ಟಿ'ಗೆ (State List) ಸೇರುತ್ತವೆ, ಆದ್ದರಿಂದ ಕೇಂದ್ರ ಸರ್ಕಾರವು ಅವುಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು ಅಸಂವಿಧಾನಿಕ ಎಂಬುದು ಬ್ಯಾಂಕುಗಳ ವಾದ. ಆದರೆ, ಠೇವಣಿದಾರರ ಹಿತದೃಷ್ಟಿಯಿಂದ 'ಬ್ಯಾಂಕಿಂಗ್' ವ್ಯವಹಾರವನ್ನು ನಿಯಂತ್ರಿಸುವ ಹಕ್ಕು ತನಗಿದೆ ಎಂದು ಆರ್‌ಬಿಐ ವಾದಿಸುತ್ತಿದೆ.


ಪ್ರಸ್ತುತ ಹಂತ: ಪ್ರಕರಣವು ಅಂತಿಮ ಹಂತದ ವಿಚಾರಣೆಯಲ್ಲಿದೆ. ಆರ್‌ಬಿಐ ಮತ್ತು ಕೇಂದ್ರ ಸರ್ಕಾರವು ಈಗಾಗಲೇ ತಮ್ಮ ಅಫಿಡವಿಟ್‌ಗಳನ್ನು ಸಲ್ಲಿಸಿವೆ.

ತಿದ್ದುಪಡಿ ಕಾಯ್ದೆಗೆ ತಡೆ ಇದೆಯೇ? ಇಲ್ಲ. 2020ರ ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಕಾಯ್ದೆಗೆ ಮದ್ರಾಸ್ ಹೈಕೋರ್ಟ್ ಯಾವುದೇ ಸಂಪೂರ್ಣ ತಡೆ (Blanket Stay) ನೀಡಿಲ್ಲ. ಅಂದರೆ ಈ ಕಾಯ್ದೆ ಈಗಲೂ ಜಾರಿಯಲ್ಲಿದೆ. ಆದರೆ, ಈ ಪ್ರಕರಣದ ಅಂತಿಮ ತೀರ್ಪಿಗೆ ಒಳಪಟ್ಟು ಆರ್‌ಬಿಐ ಕ್ರಮ ಕೈಗೊಳ್ಳಬೇಕು ಎಂದು ಕೋರ್ಟ್ ತಿಳಿಸಿದೆ.

ಎಂಡಿ ನೇಮಕಾತಿ ಸುತ್ತೋಲೆಗೆ ತಡೆ ಇದೆಯೇ? ಹೌದು. ವರ್ಗಾವಣೆಗೂ ಮೊದಲು ಕರ್ನಾಟಕ ಹೈಕೋರ್ಟ್ ಮತ್ತು ಇತರ ಕೆಲವು ಹೈಕೋರ್ಟ್‌ಗಳು ಆರ್‌ಬಿಐನ ಜೂನ್ 2021ರ ಸುತ್ತೋಲೆಗೆ (ಎಂಡಿ ನೇಮಕಾತಿ ನಿಯಮಗಳು) ಮಧ್ಯಂತರ ತಡೆ (Interim Stay) ನೀಡಿದ್ದವು. ಸುಪ್ರೀಂ ಕೋರ್ಟ್ ಈ ತಡೆಗಳನ್ನು ರದ್ದು ಮಾಡಿಲ್ಲ.

## ಫೋನ್‌ಪೇ : ಎಐ ಚಾಲಿತ ಸೌಲಭ್ಯ ಬಿಡುಗಡೆ

**ನವದೆಹಲಿ:** ಮೈಕ್ರೋಸಾಫ್ಟ್ ಫೌಂಡ್ರಿ ತಂತ್ರಜ್ಞಾನ ಬಳಸಿ ನಿರ್ಮಿಸಲಾದ ಕೃತಕ ಬುದ್ಧಿಮತ್ತೆ (ಎಐ) ಚಾಲಿತ ಹುಡುಕಾಟ ಸೌಲಭ್ಯವನ್ನು ಫೋನ್‌ಪೇ ಶನಿವಾರ ಬಿಡುಗಡೆ ಮಾಡಿದೆ. ಇದರ ಮೂಲಕ, ಬಳಕೆದಾರರು 'ಸಹಜವಾಗಿ ಆಡುವ ಭಾಷೆ'ಯಲ್ಲೆ ಧ್ವನಿ ಅಥವಾ ಪಠ್ಯಗಳ ಆಜ್ಞೆ ನೀಡಿ ಹಣ ಪಾವತಿಸಬಹುದು ಅಥವಾ ಹಳೆಯ ವ್ಯವಹಾರಗಳನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿದೆ.



"ಈ ಸೌಲಭ್ಯ ಆ್ಯಪ್ ಬಳಕೆಯನ್ನು ಹೆಚ್ಚು ಸರಳವಾಗಿಸುತ್ತದೆ ಮತ್ತು ಪ್ರತಿಯೊಬ್ಬ ಬಳಕೆದಾರರಿಗೂ ಅವರ ಅಗತ್ಯಕ್ಕೆ ತಕ್ಕಂತೆ ವೈಯಕ್ತಿಕ ಅನುಭವ ನೀಡುತ್ತದೆ. ಇದು ಹಿಂದಿನ ಮೆನುಗಳ ಬದಲಾಗಿ ಬಳಕೆದಾರರ ಉದ್ದೇಶಕ್ಕೆ ತಕ್ಕಂತೆ ಕೆಲಸ ಮಾಡುತ್ತದೆ. ಇದರಿಂದಾಗಿ ಆ್ಯಪ್ ನಲ್ಲಿ ಸಂವಾದಗಳ ಮೂಲಕವೇ ಕೆಲಸಗಳನ್ನು ಮುಗಿಸಬಹುದು' ಎಂದು ಫೋನ್‌ಪೇ ತಿಳಿಸಿದೆ.

ಉದಾಹರಣೆಗೆ, 'ಹೇಮಂತ್‌ಗೆ ರೂ. 20 ಪಾವತಿಸು' ಎಂದರೆ ಹಣ ಕಳುಹಿಸುವ ಪುಟ ಸ್ವಯಂಚಾಲಿತವಾಗಿ ತೆರೆದು ಸಂಬಂಧಿತ ಸಂಪರ್ಕಗಳನ್ನು ಪ್ರದರ್ಶಿಸುತ್ತದೆ. 'ರೀಚಾರ್ಜ್ ಫಾಸ್ಟ್‌ಟ್ಯಾಗ್' ಅಥವಾ 'ಚಿನ್ನದ ಬೆಲೆ' ಎಂದರೆ ಬಳಕೆದಾರರನ್ನು ಆ್ಯಪ್ ಸೂಕ್ತವಾದ ಪೇಜ್‌ಗೆ ಕೊಂಡೊಯ್ಯುತ್ತದೆ.

ಈ ಸೌಲಭ್ಯ ಕೇವಲ ಹುಡುಕಾಟಕ್ಕೆ ಮಾತ್ರವಲ್ಲದೆ, ಹಣ ಪಾವತಿ, ಖರೀದಿ ಅಥವಾ ಸಹಾಯ ಪಡೆಯುವುದು ಸೇರಿದಂತೆ ಬಳಕೆದಾರರ ಉದ್ದೇಶ ಅರ್ಥ ಮಾಡಿಕೊಂಡು ಕೆಲಸ ಮಾಡುತ್ತದೆ. ಇದು ಆ್ಯಪ್‌ನ ಒಳಗಿನ ಮತ್ತು ಕೌಡ್ ತಂತ್ರಜ್ಞಾನ ಎರಡನ್ನೂ ಬಳಸುತ್ತದೆ. ಆದರೆ, ಮುಖ್ಯವಾಗಿ ಬಳಕೆದಾರರ ಯಾವುದೇ ವೈಯಕ್ತಿಕ ಅಥವಾ ವ್ಯವಹಾರದ ಮಾಹಿತಿ ಹೊರಗೆ ಹೋಗದಂತೆ ಸುರಕ್ಷತೆ ವಹಿಸುತ್ತದೆ ಎಂದು ಕಂಪನಿಯು ಹೇಳಿದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- 2023ರಲ್ಲಿ ಉತ್ತರಾಖಂಡದ ನೆಹರು ಇನ್ಸ್ಟಿಟ್ಯೂಟ್ ಆಫ್ ಪರ್ವತಾರೋಹಣದಲ್ಲಿ ತರಬೇತಿ ಪಡೆದಿರುವ ಗದಗದ ಪರ್ವತಾರೋಹಿ 20ವರ್ಷದ ಹನುಮಂತರಾವ್ ಕುಲಕರ್ಣಿ ಅವರು ಈಗ ಗ್ರಾಮೀಣ ಯುವಕರಿಗೆ ಉಚಿತ ಪರ್ವತಾರೋಹಣ ತರಬೇತಿ ನೀಡಲು ನಿರ್ಧರಿಸಿದ್ದು, ಗ್ರಾಮೀಣ ಯುವಕರನ್ನು ಬಾದಾಮಿ, ಚಿತ್ರದುರ್ಗ, ಶಿವಮೊಗ್ಗ ಮತ್ತು ಪಶ್ಚಿಮ ಘಟ್ಟಗಳಿಗೆ ಕರೆದೊಯ್ಯುತ್ತಿದ್ದಾರೆ ಹಾಗೂ ನಕ್ಷೆ, ಹವಾಮಾನ, ಔಷಧಿ, ಪರ್ವತಾರೋಹಣದ ತಂತ್ರಗಳ ಬಗ್ಗೆ ತರಬೇತಿ ನೀಡುತ್ತಿದ್ದಾರೆ.
- ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನಡೆಸಿದ 2025ನೇ ಸಾಲಿನ ಸಿವಿಲ್ ನ್ಯಾಯಾಧೀಶರ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕೆಯೂರು ಗ್ರಾಮದ ಇಳಂತಾಜೆ ನಿವಾಸಿ ಶ್ರೀಧರ ಶೆಟ್ಟಿ–ಹರಿಣಾಕ್ಷಿ ದಂಪತಿಗಳ ಪುತ್ರಿ ದೀಪಿಕಾ ಎಸ್.ಶೆಟ್ಟಿ ಅವರು ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದಿದ್ದಾರೆ. ಕಳೆದ 8 ವರ್ಷಗಳಿಂದ ಬೆಂಗಳೂರಿನಲ್ಲಿ ಲಾ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ರಾಜ್ಯಕ್ಕೆ 63ನೇ ರ‍್ಯಾಂಕ್ ಗಳಿಸಿದ ಚಿತ್ರದುರ್ಗದ ಮೊಳಕಾಲ್ಮೂರು ತಾಲೂಕಿನ ರಾಯಪುರ ಗ್ರಾಮದ ಪೂಜಾರಿ ಮಾರಣ್ಣ, ನಾಗೇಂದ್ರಮ್ಮ ದಂಪತಿಗಳ ಮಗನಾದ ಸುಕೇಂದ್ರ ಅವರು ವಿದ್ಯಾರ್ಥಿ ವೇತನದ ನೆರವಿನಿಂದ ಪದವಿ, ಸ್ನಾತಕೋತ್ತರ, ಕಾನೂನು ಪದವಿ ಕಲಿಕೆ ಜತೆಗೆ ಗಳಿಕೆ ಮಾಡುತ್ತಾ ಉಡುಪಿಯಲ್ಲಿ ಕಳೆದ ಏಳು ವರ್ಷಗಳಿಂದ ನ್ಯಾಯವಾದಿಯಾಗಿದ್ದಾರೆ.
- ಈಶಾನ್ಯ ರಾಜ್ಯಗಳ ಪಟ್ಟಿಯಲ್ಲಿರುವ ಮಿಜೋರಾಂ ಸದ್ಯ ಶೇ.98.2 ರಷ್ಟು ಸಾಕ್ಷರತಾ ಪ್ರಮಾಣವನ್ನು ದಾಖಲಿಸುವ ಮೂಲಕ ದೇಶದಲ್ಲಿ ಹೆಚ್ಚು ಅಕ್ಷರಸ್ಥರಿರುವ ರಾಜ್ಯವೆಂದು ಘೋಷಿಸಲಾಗಿದೆ. ಯುನೆಸ್ಕೋ ಪ್ರಕಾರ, ಶೇ.95ರಷ್ಟು ಸಾಕ್ಷರತೆ ಇರುವ ರಾಜ್ಯ ಸಂಪೂರ್ಣ ಸಾಕ್ಷರ ಎಂದು ಘೋಷಿಸಲಾಗುತ್ತದೆ. 2011ರಲ್ಲಿ ಶೇ.91.33ರಷ್ಟಿದ್ದ, ಮಿಜೋರಾಂನ ಈಗ ಸಂಪೂರ್ಣ ಸಾಕ್ಷರತಾ ರಾಜ್ಯವಾಗಿದೆ.
- ಹುಬ್ಬಳ್ಳಿ ಜಿಲ್ಲಾ ಕೇಂದ್ರದಿಂದ 15 ಕಿ.ಮೀ ದೂರದಲ್ಲಿರುವ ಮಳಲಿ ಗ್ರಾಮದ ರೈತ ಚಂದ್ರಪ್ಪ ಹಾದಿಮನಿ, ತಮ್ಮ 30,000 ಚದರ ಅಡಿ ಕೃಷಿ ಭೂಮಿಯಲ್ಲಿ 42 ವಿಧದ ಬಗೆಯ ಗೋಧಿ ತಳಿಯನ್ನು ಬೆಳೆಸಿದ್ದಾರೆ, ಈ 42 ಬಗೆಯ ಗೋಧಿಗಳಲ್ಲಿ ಯಾವುದು ಸ್ಥಳೀಯ ಮಣ್ಣು ಮತ್ತು ಹವಾಮಾನಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ಪರೀಕ್ಷಿಸಲು ಈ ಪ್ರಯೋಗ ನಡೆಸಲಾಗಿದೆ. ಇವುಗಳಲ್ಲಿ ಪ್ರಾಚೀನ ಸಿಂಧೂ ಕಣಿವೆಯಲ್ಲಿ ಬೆಳೆಸಲಾದ ಪೈಗಂಬರಿ ಸೇರಿದಂತೆ ಕೆಲವು ಅಪರೂಪದ ಪ್ರಭೇದಗಳು ಸೇರಿವೆ. ಹಾದಿಮನಿ ಅವರ ಗೋಧಿ ಬೆಳೆ ಕೆಲವು ವಾರಗಳಲ್ಲಿ ಕೊಯ್ಲಿಗೆ ಸಿದ್ಧವಾಗಲಿದೆ.

## ಓ ದು ಗ ರ ಅ ನಿ ಸಿ ಕೆ . . .




**ಆದಷ್ಟು ಬೇಗ ಅನುಷ್ಠಾನಗೊಳ್ಳಲಿ :** ಬ್ಯಾಂಕುಗಳು ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಗ್ರಾಹಕರಿಗೆ ದಂಡ ವಿಧಿಸುವ ಬದಲು, ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವ ಮೂಲಕ ಪ್ರೋತ್ಸಾಹಿಸಬಹುದು. ಜತೆಗೆ, ಸ್ಥಿರ ಠೇವಣಿ ನಿರ್ವಹಣೆ ಮಾಡುವವರಿಗೆ ಹೆಚ್ಚಿನ ಬಡ್ಡಿ ದರ ನೀಡಬಹುದು ಲೋಕಸಭೆಯ ಅರ್ಜಿಗಳ ಸಮಿತಿ ಶಿಫಾರಸು ಮಾಡಿರುವುದು ಸ್ವಾಗತಾರ್ಹವಾಗಿದೆ. ಇದು ಆದಷ್ಟು ಬೇಗ ಅನುಷ್ಠಾನಗೊಳ್ಳಲಿ.

**ಶಿವಾನಂದ ಅಂಗಡಿ, ವಿಜಯಪುರ**

**ಸ್ವಾಗತಾರ್ಹವಾಗಿದೆ :** ನೂತನ ಕರಡು ಆದಾಯ ತೆರಿಗೆ ನಿಯಮಗಳಲ್ಲಿ ಪ್ರಸ್ತಾಪಿಸಿರುವ; ಗ್ರಾಹಕರೊಬ್ಬರು ಒಂದು ಹಣಕಾಸು ವರ್ಷದಲ್ಲಿ ತನ್ನ ಒಂದು ಅಥವಾ ಹೆಚ್ಚಿನ ಖಾತೆಗಳಲ್ಲಿ ಒಟ್ಟು ರೂ. 10 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ನಗದು ಠೇವಣಿ ಅಥವಾ ಹಿಂಪಡೆಯುವಿಕೆ ಮಾಡಿದರೆ ಮಾತ್ರ ಪ್ಯಾನ್ ಸಂಖ್ಯೆ ನಮೂದಿಸುವುದು ಕಡ್ಡಾಯವೆನ್ನುವ ನಿಯಮ ಸ್ವಾಗತಾರ್ಹವಾಗಿದೆ.

**ಎನ್. ನಾರಾಯಣ ಭಟ್, ಪುತ್ತೂರು**

**ಇವರಿಗೆ,**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.